ಮಂಡಳಿಯು ನೇಮಕಾತಿ ನಿಯಮಾವಳಿಗಳನ್ನು ಸೃಷ್ಟಿಸುವಾಗ (ಸಹಾಯಕ ಉಗ್ರಾಣಿಕ ಹುದ್ದೆಗೆ) ಪದವಿಯ ಬಗ್ಗೆ ನಿರ್ದಿಷ್ಟವಾದ ಸೂಚನೆಯನ್ನು ನಿಗದಿ ಪಡಿಸಿರುವುದಿಲ್ಲ. ಆದರೆ ನೇಮಕಾತಿ ಹೊಂದಿದ ನಂತರ ಸಹಾಯಕ ಉಗ್ರಾಣಿಕ ಪಡೆದಿರುವ ಪದವಿಯಲ್ಲಿ ತಾರತಮ್ಯ ಮಾಡಿ ಕೇವಲ ವಾಣಿಜ್ಯ ಮತ್ತು ವಿಜ್ಞಾನ ಪದವೀಧರರಿಗೆ ಮಾತ್ರ ಹೆಚ್ಚುವರಿ ವೇತನ ಮುಂಬಡ್ತಿ ನೀಡಿ ಈ ಸೌಲಭ್ಯದಿಂದ ಕಲಾ ಪದವೀಧರ ವಂಚಿತರಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಸಮಾನ ಪದವಿಯನ್ನು ಹೊಂದಿ ಈ ಮೇಲೆ ಹೇಳಿದ ಸೌಲಭ್ಯದಿಂದ ವಂಚಿತರಾಗಿರುವ ಕಲಾ ಪದವೀಧರರಿಗೆ ಇದನ್ನು ವಿಸ್ತರಿಸಲು ಮಂಡಳಿಗೆ ಇರುವ ತೊಂದರೆ ಏನು ? ಹಾಗಿದ್ದಲ್ಲಿ ಇದನ್ನು ಈಗಲಾದರೂ ಸರಕಾರ ಸರಿ ಪಡಿಸಿ ಸದರಿ ಸೌಲಭ್ಯವನ್ನು ಕಲಾ ಪದವೀಧರರಿಗೂ ವಿಸ್ತರಿಸುವುದೇ ? ಅಂದರೆ ಇದನ್ನು ಯಾವಾಗ ಅಮಲಿನಲ್ಲಿ ತರಲಾಗುತ್ತದೆ ?

ಈ ಮಂಡಳಿಯಲ್ಲಿ ಗುಮಾಸ್ತ ಸಿಬ್ಬಂದಿ ಆಥವಾ ಖಜಾನೆ ಶಾಖೆಯಲ್ಲಿ ಕಲಾ ಪದವಿಯನ್ನು ಹೊಂದಿರುವ ಸಿಬ್ಬಂದಿಯು ಪ್ರಸ್ತುತ ನಾಲ್ಕು ವೇತನ ಹೆಚ್ಚುವರಿ ಮುಂಬಡ್ತಿಗಳನ್ನು ಪಡೆಯುತ್ತಿದ್ದು ಈ ಸೌಲಭ್ಯದಿಂದ ಸಮಾನ ಪದವಿ ಹಾಗೂ ಹುದ್ದೆಯನ್ನು ಹೊಂದಿರುವ ಸಹಾಯಕ ಉಗ್ರಾಣಿಕರಿಗೆ ಇದನ್ನು ನೀಡಲಾಗುತ್ತಿಲ್ಲ. ಏಕೆ ?

ಸರಕಾರ ಇದನ್ನು ಈಗಲಾದರೂ ಸರಿಪಡಿಸಿ ಅಮಲಿನಲ್ಲಿ ತರಲು ಯೋಚಿಸಿದೆಯೇ ? ಅಂದರೆ ಯಾವಾಗ ಇದನ್ನು ಕೃತಿಯಲ್ಲಿ ಜಾರಿಗೊಳಿಸಲಾಗುತ್ತದೆ.

SRI K.A. NISSAR AHAMAD (Minister for Energy):– Respected Madam, as per the present Board's norms, four Advance increments are not being sanctioned to the Assistant Store Keepers with Arts Degree. The subject issued is under consideration of the Board and orders are awaited.

ಬೆಂಗಳೂರು ನಗರದ ಶ್ರೀರಾಮಪುರ ಬಡಾವಣೆಯಲ್ಲಿ ವಿದ್ಯುತ್ ಅಧಿಕ ವೋಲ್ಟೇಜಿನಿಂದಾಗಿ ವಿದ್ಯುತ್ ಉಪಕರಣಗಳು ಹಾಗೂ ಟಿ.ವಿ. ಸೆಟ್‌ಗಳು ಸುಟ್ಟು ಹೋಗಿದ್ದು ಅದಕ್ಕಾಗಿ ವಿದ್ಯುತ್ ಮಂಡಳಿಯವರಿಂದ ಸೂಕ್ತ ಪರಿಹಾರ

ಶ್ರೀ ಆರ್. ದಯಾನಂದರಾವ್ (ಗಾಂಧಿನಗರ):– ಮಾನ್ಯ ಅಧ್ಯಕ್ಷಣಿಯವರೇ, ಬೆಂಗಳೂರು ನಗರದ ಶ್ರೀರಾಮಪುರದ ಬಡಾವಣೆಯಲ್ಲಿ ದಿನಾಂಕ 21–2–93ರಂದು ಇದ್ದಕ್ಕಿದ್ದ ಹಾಗೆ 440ಕೆ.ವಿ. ವಿದ್ಯುತ್ ಪೂರೈಕೆ ಆಗಿದ್ದರಿಂದ ಹಲವಾರು ಟಿ.ವಿ. ಸೆಟ್‌ಗಳು ಹಾಗೂ ಇತರ ವಿದ್ಯುತ್ ಉಪಕರಣಗಳು ಸುಟ್ಟು ಹೋಗಿವೆ. ಈ ರೀತಿ ಅಧಿಕ ವೋಲ್ಟೇಜಿನಿಂದಾಗಿ ಸಂಭವಿಸಿದ ನಷ್ಟಕ್ಕೆ ಕರ್ನಾಟಕ ವಿದ್ಯುತ್ ಮಂಡಳಿಯವರು ಜವಾಬ್ದಾರರಾಗಿರುತ್ತಾರೆ. ಆದ್ದರಿಂದ ಇದರ ಬಗ್ಗೆ ಕೂಡಲೇ ವಿಚಾರಣೆ ನಡೆಸಬೇಕು ಹಾಗೂ ಬೆಲೆ ಬಾಳುವ ವಿದ್ಯುತ್ ಉಪಕರಣಗಳನ್ನು ಹಾಗೂ ಟಿ.ವಿ. ಮುಂತಾದ ಬೆಲೆಬಾಳುವ ಪದಾರ್ಥಗಳು ಹಾಳಾಗಿ ನಷ್ಟಕ್ಕೆ ಒಳಗಾಗಿರುವವರಿಗೆ ವಿದ್ಯುತ್ ಮಂಡಳಿಯ ವತಿಯಿಂದ ಸೂಕ್ತ ಪರಿಹಾರ ನೀಡಲು ಸನ್ಮಾನ್ಯ ವಿದ್ಯುತ್ ಸಚಿವರನ್ನು ಕೋರುತ್ತೇನೆ.

SRI K.A. NISSAR AHAMED (Minister for Energy):– It has come to the notice of the Board that on 21st February 1993, heavy reduction in the Voltage has cut across Lakshminarayanapura in Sreeampura area of Bangalore. The T.V. Sets, Radios, Taperecorders, Tube lights of the residents of that area have been burnt out. The reason for this is that on the above said date, at 4.30 P.M. some children were playing football.....

(Interruptions)

ಶ್ರೀ ಆರ್. ದಯಾನಂದ ರಾವ್:– ಕನ್ನಡದಲ್ಲಿ ಹೇಳಿಕೆ ನೀಡಬೇಕು.....

(ಗೊಂದಲ)

ಶ್ರೀ ಎಸ್.ಎಚ್. ಕೌಜಲಗಿ :– ಇವರಿಗೆ ಕನ್ನಡವೇ ಬರುವುದಿಲ್ಲವೇ ?

(ಗೊಂದಲ)

SRI K.A. NISSAR AHAMED:– The bill hit the Neutral wire which has resulted in the said loss. For this the K.E.B. staff are not responsible. Immediately after the residents of the said area brought this to the notice of the concerned O and M Unit of K.E.B. the said defect has been rectified and the arrangements have been made for supply of 220 Volts of power. Since the above incident is an accident one, the question of paying compensaiton does not arise.

ಸಂಗಮೇಶ್ವರ ಹಾಗೂ ಬೆಳಗಲಿ ಗ್ರಾಮಗಳಲ್ಲಿ ಪಶು ಚಿಕಿತ್ಸಾಲಯ

ಶ್ರೀ ಪಿ.ಸಿ. ಸಿದ್ದನಗೌಡರ್:– ಸನ್ಮಾನ್ಯ ಅಧ್ಯಕ್ಷಣಿಯವರೆ ಕಲಘಟಗಿ ತಾಲ್ಲೂಕು ಸಂಗಮೇಶ್ವರ ಗ್ರಾಮ ಹಾಗೂ ಹುಬ್ಬಳ್ಳಿ ತಾಲ್ಲೂಕಿನ ಬೆಳಗಲಿ ಗ್ರಾಮದಲ್ಲಿ ಪಶು ಚಿಕಿತ್ಸಾಲಯ ಇಲ್ಲದೆ ಅಲ್ಲಿನ ಜಾನುವಾರುಗಳಿಗೆ ಮತ್ತು ಸಾರ್ವಜನಿಕರಿಗೆ ತುಂಬ ತೊಂದರೆಯಾಗಿರುತ್ತದೆ. ಅಲ್ಲಿ ಸುತ್ತಮುತ್ತಲು ಪಶುವೈದ್ಯ ಚಿಕಿತ್ಸಾಲಯಗಳು ಎಲ್ಲೂ ಇರುವುದಿಲ್ಲ. ಆದಕಾರಣ ಈ ಎರಡು ಗ್ರಾಮಗಳಲ್ಲಿ ಸರ್ಕಾರಿ ಪಶು ವೈದ್ಯ ಚಿಕಿತ್ಸಾಲಯಗಳು ಮತ್ತು ಹುಬ್ಬಳ್ಳಿ ತಾಲ್ಲೂಕಿನ ನೂಲ್ವಿ ಗ್ರಾಮದಲ್ಲಿ ಈಗಿರುವ ಪಶು ವೈದ್ಯ ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೆ ಏರಿಸಬೇಕೆಂದು ಮಾನ್ಯ ಪಶು ಸಂಗೋಪನಾ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಸಂಗಮೇಶ್ವರ ಹಾಗೂ ಬೆಳಗಲಿ ಗ್ರಾಮಗಳಿಗೆ ಪಶು ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದು. ನೂಲ್ವಿ ಗ್ರಾಮದ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವ ದಿಸೆಯಲ್ಲಿ ಈ ಕೆಳಕಂಡ ಹೇಳಿಕೆಯನ್ನು ಕೊಡಬಯಸುತ್ತೇನೆ.

ಕಲಘಟಗಿ ತಾಲ್ಲೂಕು ಸಂಗಮೇಶ್ವರ ಗ್ರಾಮ ಹಾಗೂ ಹುಬ್ಬಳ್ಳಿ ತಾಲ್ಲೂಕಿನ ಬೆಳಗಲಿ ಗ್ರಾಮಗಳಲ್ಲಿ ಪಶು ಚಿಕಿತ್ಸಾಲಯಗಳು ಇಲ್ಲದೆ ಅಲ್ಲಿರುವ ಜಾನುವಾರುಗಳಿಗೆ ಮತ್ತು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಇಲ್ಲಿ ಸುತ್ತಮುತ್ತಲೂ ಎಲ್ಲೂ ಪಶು ಚಿಕಿತ್ಸಾಲಯಗಳಿರುವುದಿಲ್ಲ. ಆದಕಾರಣ, ಈ ಎರಡು ಗ್ರಾಮದಲ್ಲಿ ಈಗಿರುವ ಪಶು ಚಿಕಿತ್ಸಾಲಯಗಳನ್ನು ಮತ್ತು ಹುಬ್ಬಳ್ಳಿಯ ನೂಲ್ವಿ ಗ್ರಾಮದಲ್ಲಿ ಈಗಿರುವ ಪಶು ಚಿಕಿತ್ಸಾಲಯವನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ.

ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕು ಸಂಗಮೇಶ್ವರ ಗ್ರಾಮಕ್ಕೆ ಹಾಗೂ ಹುಬ್ಬಳ್ಳಿ ತಾಲ್ಲೂಕಿನ ಬೆಳಗಲಿ ಗ್ರಾಮದಲ್ಲಿ ಪಶು ಚಿಕಿತ್ಸಾಲಯಗಳನ್ನು ತೆರೆಯುವ ಬಗ್ಗೆ, ಕಲಘಟಗಿ ತಾಲ್ಲೂಕಿನ ಒಟ್ಟು ಜಾನುವಾರುಗಳ ಸಂಖ್ಯೆ 96,813 ಇದ್ದು, ಅದಕ್ಕನುಗುಣವಾಗಿ 66,897 ದನಗಳ ಘಟಕಗಳು ಇರುತ್ತವೆ. ಈ ದನಗಳ ಘಟಕಗಳಿಗೆ ಅನುಗುಣವಾಗಿ ಈ ತಾಲ್ಲೂಕಿಗೆ ಒಟ್ಟು 13 ಪಶು ಚಿಕಿತ್ಸಾ ಕೇಂದ್ರಗಳು ಬೇಕಾಗಿರುತ್ತವೆ. ಹಾಲಿ ಈಗ 7 ಪಶು ಚಿಕಿತ್ಸಾ ಕೇಂದ್ರಗಳಿದ್ದು ಇನ್ನೂ 6 ಪಶು ಚಿಕಿತ್ಸಾ